ಒಂದು ದಟ್ಟ ಕಾಡಿನಲ್ಲಿ ದೊಡ್ಡ ಹುಲಿಯಿತ್ತು. ಅದಕ್ಕೆ ತಾನೊಬ್ಬನೇ ಬಲಶಾಲಿ ಎಂಬ ಗರ್ವ ನೆತ್ತಿಗೇರಿತ್ತು. ಒಂದು ದಿನ ಮಧ್ಯಾಹ್ನದ ಸಮಯ. ಸೂರ್ಯನ ಬಿಸಿಲಿನ ತಾಪದಿಂದ ಬಳಲಿ ಹುಲಿ ನೀರನ್ನು ಹುಡುಕುತ್ತ ಹೊರಟಿತು. ಕಡು ಬೇಸಗೆಯಿಂದಾಗಿ ನೀರಿನಾಸರೆಗಳೆಲ್ಲ ಬತ್ತಿದ್ದವು. ಕಡೆಗೂ ಒಂದು ಸಣ್ಣ ಕೊಳದಲ್ಲಿ ಸ್ವಲ್ಪ ನೀರು ಕಾಣಿಸಿತು. ಕೊಳಕ್ಕಿಳಿದು ನೀರು ಕುಡಿಯುವಾಗ ಅದರ ಹಾಗೆಯೇ ದಾಹದಿಂದ ಬಸವಳಿದು ನೀರನ್ನು ಅರಸಿ ಬಂದ ಹಂದಿಯೊಂದು ಇನ್ನೊಂದು ಬದಿಯಿಂದ ಕೊಳಕ್ಕಿಳಿಯಿತು. ನೀರು ಕುಡಿಯಲು ಮುಂದಾಯಿತು.

ಹಂದಿಯನ್ನು ಕಾಣುತ್ತಲೇ ಹುಲಿಯ ಕೋಪ ನೆತ್ತಿಗೇರಿತು. 'ನಿಲ್ಲಿಸು!' ಎಂದು ಗರ್ಜಿಸಿತು. 'ದೊಡ್ಡವರು ನೀರು ಕುಡಿಯುವಾಗ ಅಲ್ಪರು ಬಂದು ಬಾಯಿ ಹಾಕುವುದೆ? ದೂರ ನಿಲ್ಲು. ನಾನು ಬೇಕಾದಷ್ಟು ನೀರು ಕುಡಿದು ಹೋದ ಮೇಲೆ ಮಾತ್ರ ನಿನಗೆ ಕುಡಿಯುವ ಹಕ್ಕು' ಎಂದು ಆಜ್ಞಾಪಿಸಿತು. ಹಂದಿ ಸುಮ್ಮನಿರಲಿಲ್ಲ. 'ಬಾಯಾರಿದಾಗ ಎಲ್ಲ ಜೀವಿಗಳೂ ನೀರು ಕುಡಿದು ಬದುಕಲಿ ಎಂದು ದೇವರು ನೀರಿನ ಸೃಷ್ಟಿ ಮಾಡಿದ. ಅವನ ಕೊಡುಗೆಯನ್ನು ಬಳಸಿಕೊಳ್ಳುವಲ್ಲಿ ದೊಡ್ಡವರು, ಸಣ್ಣವರು ಎಂಬ ಭೇದ ಯಾಕೆ? ಇಬ್ಬರೂ ನಮಗೆ ಬೇಕಾದಷ್ಟು ನೀರು ಕುಡಿದು ನಮ್ಮ ಪಾಡಿಗೆ ಹೋಗೋಣ' ಎಂದು ವಿನಯದಿಂದಲೇ ಹೇಳಿತು. 'ಏನೆಂದೆ? ಅಧಿಕಪ್ರಸಂಗಿ, ನಿನಗೆ ಪೊಗರು ಅತಿಯಾಯಿತು. ದೊಡ್ಡವನಾದ ನನ್ನ ಶಕ್ತಿ ಎಷ್ಟೆಂಬುದು ನಿನಗೆ ತಿಳಿಯದು. ಅದು ಇತ್ಯರ್ಥವಾಗಬೇಕು. ನನ್ನ ಜೊತೆಗೆ ಖಾಡಾಖಾಡಿ ಯುದ್ಧ ಮಾಡಿ ನೀನು ಗೆಲ್ಲಬೇಕು. ಇಲ್ಲವಾದರೆ ನನಗೆ ಎದುರಾಡಿದ ಅಪರಾಧಕ್ಕೆ ನಿನ್ನನ್ನು ಈಗಲೇ ಸೀಳಿ ಹಾಕುತ್ತೇನೆ' ಎಂದು ಗರ್ಜಿಸಿತು.

ಆಗಲೂ ಹಂದಿಗೆ ಸೋಲೊಪ್ಪಿಕೊಳ್ಳಬಹುದಿತ್ತು. ಆದರೆ ಅದು ಹಾಗೆ ಮಾಡಲಿಲ್ಲ. ಜೋರಾಗಿ ನಕ್ಕು ಹುಲಿಯನ್ನು ಮೂದಲಿಸಿತು. 'ಏನೆಂದೆ? ನಿನಗೂ ನನಗೂ ಯುದ್ಧ ಸಂಭವಿಸಿದರೆ ನಾನೇನು ಸೋತು ನಿನ್ನ ದೊಡ್ಡತನವನ್ನು ಒಪ್ಪಿಕೊಳ್ಳುತ್ತೇನೆ ಎಂದು ತಿಳಿದೆಯಾ? ಮೂರ್ಖ ನೀನು! ನೀನೆಣಿಸಿದಂತೆ ಖಂಡಿತ ಆಗುವುದಿಲ್ಲ. ಯಾವುದಕ್ಕೂ ಈಗ ವೇಳೆ, ಗಳಿಗೆಗಳು ಚೆನ್ನಾಗಿಲ್ಲ. ನಾಳೆ ಬೆಳಗ್ಗೆ ಇದೇ ಕೊಳದ ದಂಡೆಯಲ್ಲಿ ನಮ್ಮಿಬ್ಬರ ಶಕ್ತಿ ಪ್ರದರ್ಶನವಾಗಲಿ. ಆದರೆ ನೆನಪಿಟ್ಟುಕೊ. ಗಾತ್ರದಲ್ಲಿ ನಾನು ನಿನಗೆ ಅಲ್ಪನಾಗಿ ಕಾಣಿಸಬಹುದು. ಯುದ್ಧದಲ್ಲಿ ನಿನ್ನ ಶಕ್ತಿ ನನ್ನ ಮುಂದೆ ನಿಷ್ಪ್ರಯೋಜಕವಾಗುತ್ತದೆ. ಗೆಲ್ಲುವುದು ನಾನೇ' ಎಂದು ಸವಾಲು ಹಾಕಿತು. 'ಆಗಲಿ ಬಿಡು. ನಾಳೆ ಬೆಳಗ್ಗೆ ನಿನ್ನ ಬಂಧುಗಳಿಗೆ ಇದೇ ಕಡೆಯ ಭೇಟಿ ಎಂದು ಹೇಳಿ ಬಾ. ಇಲ್ಲಿಯೇ ಯುದ್ಧ ನಡೆದು ಜಯಾಪಜಯಗಳು ನಿರ್ಣಯವಾಗಲಿ' ಎಂದು ಮೀಸೆ ತಿರುವುತ್ತ ಹುಲಿ ಹೊರಟುಹೋಯಿತು.

ಹಂದಿ ಸವಾಲನ್ನೇನೋ ಹಾಕಿತು. ಆದರೆ ಅದಕ್ಕೆ ಹುಲಿ ಎಷ್ಟು ಬಲಶಾಲಿಯೆಂಬುದು ಗೊತ್ತಿತ್ತು. ಅದನ್ನು ಗೆಲ್ಲಲು ತಾನು ಸಮರ್ಥನಲ್ಲ ಎಂಬುದೂ ಅರಿವಿತ್ತು. ಕತ್ತಲಾಗುವ ವರೆಗೆ ಸುಮ್ಮನೆ ಕುಳಿತಿತು. ಕತ್ತಲು ಮುಸುಕಿದ ಮೇಲೆ ಒಂದಿಷ್ಟು ಗಡ್ಡೆ ಗೆಣಸುಗಳನ್ನು ಅಗೆದು ಒಂದು ಚೀಲದಲ್ಲಿ ತುಂಬಿಸಿ ತೆಗೆದುಕೊಂಡಿತು. ಪ್ರಾಣಿಗಳಿಗೆ ಕಷ್ಟ ಬಂದಾಗ ಯೋಗ್ಯ ಸಲಹೆ ನೀಡಿ ಬದುಕುವ ಉಪಾಯ ಹೇಳಿ ಕೊಡುತ್ತಿದ್ದ ಒಂದು ಜಾಣ ನರಿ ಗವಿಯೊಂದರಲ್ಲಿ ವಾಸವಾಗಿತ್ತು. ಮುದಿಯಾದ ಕಾರಣ ಅದಕ್ಕೆ ಹೊರಗೆ ಸಂಚಾರಕ್ಕೆ ಸಾಧ್ಯವಿರಲಿಲ್ಲ. ಆದರೆ ಮೆದುಳು ಮುಪ್ಪಾಗಿರಲಿಲ್ಲ. ಅದರ ಬಳಿಗೆ ಬಂದವರಿಗೆ ಸಲಹೆಗಳನ್ನು ಕೊಡುತ್ತಿತ್ತು. ಹಂದಿ ಮೆಲ್ಲಗೆ ನರಿಯ ಬಳಿಗೆ ಹೋಯಿತು. ಗಡ್ಡೆ ಗೆಣಸುಗಳ ಕಾಣಿಕೆಯನ್ನು ನರಿಯ ಮುಂದಿಟ್ಟು ಕೈಮುಗಿದು